ಕರ್ನಾಟಕ ಸರ್ಕಾರ

ಸಂಖ್ಯೆ:ಎಡಿಸಿ:ಎಎಲ್‌ಎನ್(ಎಸ್)ಎಸ್‌ಆರ್(ಕೆ.ಟಿ):60/2005-06.

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಬೆಂಗಳೂರು ಜಿಲ್ಲೆ,
ಬೆಂಗಳೂರು, ದಿನಾಂಕ: 17-11-2005.

:: ಅಧಿಕೃತ ಜ್ಞಾಪನ ::

ವಿಷಯ: ಬೆಂಗಳೂರು ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕೆಂಗೇರಿ ಗ್ರಾಮದ ಸರ್ವೆನಂಬರ್.61/1ಎ7ರಲ್ಲಿನ ಒಟ್ಟು 1-39 ಗುಂಟೆ (ಒಂದು ಎಕರೆ ಮೂವತ್ತೊಂಭತ್ತು ಗುಂಟೆ) ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ ಶ್ರೀ ರೇವಣ್ಣ ಬಿನ್ ಪುಟ್ಟಯ್ಯ, ಸುಣ್ಣದಕಲ್ಲು ಪಾಳ್ಯ, ಕೆಂಗೇರಿ, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು ರವರು ಸಲ್ಲಿಸಿರುವ ಅರ್ಜಿ ದಿನಾಂಕ: 20-04-2005.

ಉಲ್ಲೇಖ: 1) ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು ರವರ ವರದಿ ಸಂಖ್ಯೆ:ಎಎಲ್‌ಎನ್: ಎಸ್‌ಆರ್(ಕೆಂ):35:2005-06, ದಿನಾಂಕ: 30-04-2005.
2) ಈ ಕಛೇರಿ ಸಮ ಸಂಖ್ಯೆ ತಿಳುವಳಿಕೆ ಪತ್ರ ದಿನಾಂಕ: 05-10-2005.
3) ಭೂ ಪರಿವರ್ತನಾ ಶುಲ್ಕ ರೂ.1,07,539-00 ಹಾಗೂ ಪೋಡಿ ಶುಲ್ಕ ರೂ.55-00, ಒಟ್ಟು ರೂ.1,07,594-00ಗಳನ್ನು ಚಲನ್ ನಂಬರ್.72, ದಿನಾಂಕ: 27-10-2005ರಂದು ಎಸ್.ಬಿ.ಎಂ. ಟ್ರಜರಿ ಶಾಖೆ, ಬೆಂಗಳೂರಿನಲ್ಲಿ ಅರ್ಜಿದಾರರು ಜಮಾ ಮಾಡಿರುತ್ತಾರೆ.

* * *

ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ.95(2), 95(4) ಮತ್ತು 95(7)ರ ಷರತ್ತುಗಳು ಹಾಗೂ ಷರತ್ತುಗೊಳಪಡಿಸಿ, ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ನಿಯಮಗಳು 1964ರ ನಿಯಮ 107 (1)ರಂತೆ ಎಕರೆ ಒಂದಕ್ಕೆ ರೂ.54,450-00 (ರೂಪಾಯಿಗಳು ಐವತ್ತು ನಾಲ್ಕು ಸಾವಿರದ ನಾಲ್ಕು ನೂರ ಐವತ್ತು ಮಾತ್ರ) ಗಳಂತೆ ಅರ್ಜಿದಾರರು ಉಲ್ಲೇಖ (3) ರಲ್ಲಿ ನಮೂದಿಸಿರುವಂತೆ ಹಣವನ್ನು ಜಮಾ ಮಾಡಿದ ಮೇರೆಗೆ ಅರ್ಜಿದಾರರಾದ ಶ್ರೀ ರೇವಣ್ಣ ಬಿನ್ ಪುಟ್ಟಯ್ಯ, ಸುಣ್ಣದಕಲ್ಲು ಪಾಳ್ಯ, ಕೆಂಗೇರಿ, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು ರವರ ಅರ್ಜಿಯನ್ನು ಪರಿಗಣಿಸಿ ಕೆಂಗೇರಿ ಹೋಬಳಿ, ಕೆಂಗೇರಿ ಗ್ರಾಮದ ಸರ್ವೆನಂಬರ್.61/1ಎ7ರಲ್ಲಿನ ಒಟ್ಟು 1-39 ಗುಂಟೆ (ಒಂದು ಎಕರೆ ಮೂವತ್ತೊಂಭತ್ತು ಗುಂಟೆ) ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಬಳಸಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಭೂ ಪರಿವರ್ತನಾ ಆದೇಶವನ್ನು ಹೊರಡಿಸಲಾಗಿದೆ.

1) ಈ ಭೂಮಿಯು ಯಾವ ಉದ್ದೇಶಕ್ಕಾಗಿ ಪರಿವರ್ತನೆಯಾಗಿದೆಯೋ ಆ ಉದ್ದೇಶಕ್ಕಾಗಿ ಉಪಯೋಗಿಸಿ ಕೊಳ್ಳಲು ಸಕ್ಷಮ ಪ್ರಾಧಿಕಾರಿಯಿಂದ ಅಂದರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ : ಬಿ.ಎಂ.ಆರ್.ಡಿ.ಎ. : ಬಿ.ಎಂ.ಐ.ಸಿ.ಪಿ. : ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ರವರಿಂದ ಮಂಜೂರಾತಿಯನ್ನು ಪಡೆಯದ ಹೊರತು ಈ ಆದೇಶವು ಅನುಭವದಾರನಿಗೆ ಯಾವುದೇ ಹಕ್ಕನ್ನು ನೀಡುವುದಿಲ್ಲ.

2) ಈ ಪರಿವರ್ತಿತ ಜಮೀನನ್ನು ವಾಸದ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು. ಈ ಜಮೀನನ್ನು ಪೂರ್ವಾನುಮತಿ ಇಲ್ಲದೆ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬಾರದು.

3) ಈ ಜಮೀನಿನಲ್ಲಿ ಉದ್ದೇಶಿಸಿರುವ ಬಡಾವಣೆ ನಕ್ಷೆ ಹಾಗೂ ಪರವಾನಗಿ ಇತ್ಯಾದಿಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ : ಬಿ.ಎಂ.ಆರ್.ಡಿ.ಎ. : ಬಿ.ಎಂ.ಐ.ಸಿ.ಪಿ. : ರವರಿಂದ ಅನುಮೋದಿಸಿಕೊಂಡು ಆ ನಂತರ ಅನುಮೋದನೆಗೊಂಡ ನಕ್ಷೆಗೆ ಅನುಗುಣವಾಗಿ ಕಟ್ಟಡವನ್ನು ಕಟ್ಟುವುದು. ಸದರಿ ಜಮೀನಿನಲ್ಲಿ ಲೇಔಟ್ ಪ್ಲಾನಿಗೆ ಅನುಮೋದನೆ ಪಡೆಯದೆ ಪರಭಾರೆ ಮಾಡಕೂಡದು.

4) ಇತರೆ ಅವಶ್ಯವಾದ ರಸ್ತೆ ಜಾಗ, ರಸ್ತೆ ಮಾರ್ಜಿನ್, ಖಾಲಿ ಜಾಗ ಇತ್ಯಾದಿಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ : ಬಿ.ಎಂ.ಆರ್.ಡಿ.ಎ. : ಬಿ.ಎಂ.ಐ.ಸಿ.ಪಿ. : ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ರವರಿಂದ ಅನುಮೋದಿಸಿದ ಬಡಾವಣೆ ನಕ್ಷೆ ಪ್ರಕಾರ ಹಾಗೂ ನಿರ್ಧಿಷ್ಟ ಪಡಿಸಿದ ನಿಯಮಗಳ ರೀತ್ಯ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು.

5) ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಜಮೀನಿನಲ್ಲಿ ನಿವೇಶನದಾರರಿಗೆ ನಾಗರೀಕ ಸೌಲಭ್ಯಗಳಾದ ವಿದ್ಯುಚ್ಛಕ್ತಿ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ ಇತ್ಯಾದಿಗಳನ್ನು ಆರೋಗ್ಯ ನೈರ್ಮಲೀಕರಣ ಹಾಗೂ ಭದ್ರತೆಗಳ ಉದ್ದೇಶದಿಂದ ಎಲ್ಲಾ ಸೌಲಭ್ಯಗಳನ್ನು ಕಾನೂನು ರೀತ್ಯಾ ಒದಗಿಸಿಕೊಡುವುದು ಅರ್ಜಿದಾರರ ಜವಾಬ್ದಾರಿಯಾಗಿರುತ್ತದೆ.

..2)

6) ಈ ಆದೇಶವು ಸದರಿ ಜಮೀನಿಗೆ ಸಂಭಂಧಪಟ್ಟಂತೆ ಯಾವುದೇ ನ್ಯಾಯಾಲಯದ ... ಅರ್ಜಿ:ಮೇಲ್ಮನವಿಯ ತೀರ್ಪಿಗೆ ಒಳಪಟ್ಟಿರುತ್ತದೆ. ಪ್ರಶ್ನಿತ ಜಮೀನಿನ ಮೇಲೆ ಯಾವುದೇ ... ನಡವಳಿಕೆಯೇನಾದರೂ ನಡೆಸಿದ್ದಲ್ಲಿ ಈ ಪ್ರಾಧಿಕಾರದ ಆದೇಶಕ್ಕೆ ಸಂಬಂಧವಿರುವುದಿಲ್ಲ. ಭೂ ಪರಿವ... ಸಲ್ಲಿಸಿರುವ ದಾಖಲೆಗಳು ಸುಳ್ಳು ಅಥವಾ ಮೋಸಕರವೆಂದು ಕಂಡು ಬಂದಲ್ಲಿ ಈ ಆದೇಶವು ... ರದ್ದುಗೊಳ್ಳುತ್ತದೆ.

7) ಈ ಜಮೀನಿಗೆ ತಾಕು ಫೂಟ್ ಖರಾಬ್ ಜಮೀನಿದ್ದಲ್ಲಿ ಕರ್ನಾಟಕ ಭೂ ಕಂಧಾಯ ಕಾಯ್ದೆ 1964 ಕಲಂ.67ರಂತೆ ಸರ್ಕಾರಕ್ಕೆ ಕಾಯ್ದಿರಿಸತಕ್ಕದ್ದು. ಹಾಗೂ ಪ್ರಸ್ತುತ ಭೂ ಪರಿವರ್ತನೆಗೆ ಒಳಪಟ್ಟಿರುವ ಸರ್ವೆನಂ. 61/1ಎ7ರಲ್ಲಿನ ವಿಸ್ತೀರ್ಣ 0-04 ಗುಂಟೆ "ಬಿ" ಖರಾಬ್ ಜಮೀನಿದ್ದು, ಈ "ಬಿ" ಖರಾಬಿನ ವಿಸ್ತೀರ್ಣದ ಹಕ್ಕು ಯಾವಾಗಲೂ ಸರ್ಕಾರಕ್ಕೆ ಸೇರಿರುತ್ತದೆ. ತಹಶೀಲ್ದಾರ್‌ರವರು ಈ ಬಾಬ್ತು ಆರ್.ಟಿ.ಸಿ ಯಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.

8) ಸರ್ಕಾರದ ಆದೇಶ ಸಂಖ್ಯೆ:ಪಿಡಬ್ಲ್ಯೂಡಿ:7556-665 ಆರ್ ಮತ್ತು ಬಿ–6-54-5 ಮತ್ತು ಕೇಂದ್ರ ಸರ್ಕಾರದ ಸಾರಿಗೆ ಇಲಾಖೆಯ ಪತ್ರದ ನಂ.ಪಿ 1: 7(11)67, ದಿನಾಂಕ: 1.1.1966 ರಂತೆ ಈ ಜಮೀನಿನಲ್ಲಿ ಕಟ್ಟಲು ಉದ್ದೇಶಿಸಿರುವ ಕಟ್ಟಡವು ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ 40 ಮೀಟರ್‌ಗಳ ಅಂತರವನ್ನು ಮತ್ತು ಜಿಲ್ಲಾ ಹೆದ್ದಾರಿಗೆ ಸಂಬಂಧಿಸಿದಂತೆ, ರಸ್ತೆಯ ಮಧ್ಯಭಾಗದಿಂದ 25 ಮೀಟರ್‌ಗಳ ಅಂತರವನ್ನು ಕಾದಿರಿಸಬೇಕು ಹಾಗೂ ಈ ಖಾಲಿ ಪ್ರದೇಶದಲ್ಲಿ ಯಾವುದೇ ಕಟ್ಟಡವನ್ನು ಕಟ್ಟಬಾರದು.

9) ಈ ಭೂ ಪರಿವರ್ತನಾ ಜಮೀನಿನಲ್ಲಿ ಸಾರ್ವಜನಿಕರ ಆರೋಗ್ಯಕ್ಕೆ ಯಾವುದೇ ರೀತಿಯ ಹಾನಿಯಾಗದಂತೆ ಹಾಗೂ ಪರಿಸರ ಮಾಲಿನ್ಯವಾಗದಂತೆ ನೋಡಿಕೊಳ್ಳತಕ್ಕದ್ದು.

ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಭೂ ಪರಿವರ್ತನೆ ಆದೇಶ ಯಾವುದೇ ಸೂಚನೆ ನೀಡದೆ ರದ್ದುಗೊಳಿಸಲಾಗುವುದು ಮತ್ತು ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಕಲಂ.96 ರಂತೆ ದಂಡ ಶುಲ್ಕವನ್ನು ವಿಧಿಸಲು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.ಅಲ್ಲದೆ ಈ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿದ ಕಟ್ಟಡಗಳನ್ನು ಯಾವುದೇ ಪರಿಹಾರ ನೀಡದೆ ಕೆಡವಲು ಕ್ರಮ ತೆಗೆದುಕೊಳ್ಳಲಾಗುವುದು ಹಾಗೂ ಆದಕ್ಕೆ ತಗಲುವ ವೆಚ್ಚವನ್ನು ಭೂ ಕಂದಾಯ ಬಾಕಿ ಎಂದು ಖಾತೇದಾರರಿಂದ ವಸೂಲಿ ಮಾಡಲಾಗುವುದು.

: ಷೆಡ್ಯೂಲ್ ವಿವರ :

ಬೆಂಗಳೂರು ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕೆಂಗೇರಿ ಗ್ರಾಮದ ಸರ್ವೆನಂಬರ್. 61/1ಎ7ರಲ್ಲಿನ ... 1-39 ಗುಂಟೆ (ಒಂದು ಎಕರೆ ಮೂವತ್ತೊಂಭತ್ತು ಗುಂಟೆ ವಿಸ್ತೀರ್ಣಕ್ಕೆ ಮಾತ್ರ) ವಿಸ್ತೀರ್ಣಕ್ಕೆ ಭೂ ಪರಿವರ್ತಿತ ಜಮೀನಿಗೆ ಚಕ್ಕುಬಂದಿ:

| | | |
|---|---|---|
| ಪೂರ್ವಕ್ಕೆ | :: | ಬೇರೆಯವರ ಸ್ವತ್ತು. |
| ಪಶ್ಚಿಮಕ್ಕೆ | :: | ಸಿದ್ದಮ್ಮನವರ ಸ್ವತ್ತು. |
| ಉತ್ತರಕ್ಕೆ | :: | ಮುದ್ದಮ್ಮನವರ ಸ್ವತ್ತು. |
| ದಕ್ಷಿಣಕ್ಕೆ | :: | ನಾರಾಯಣಪ್ಪನವರ ಸ್ವತ್ತು. |

"ಛಾಯಪ್ರತಿ"

ಜಿಲ್ಲಾಧಿಕಾರಿಗಳ ಪರವಾಗಿ
ಬೆಂಗಳೂರು ಜಿಲ್ಲೆ

ಸಹಿ/–
( ಡಾ: ರಾಮೇಗೌಡ )
ವಿಶೇಷ ಜಿಲ್ಲಾಧಿಕಾರಿ (ಕಂ.)
ಬೆಂಗಳೂರು ಜಿಲ್ಲೆ.

ಪ್ರತಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕೆಳಕಂಡವರಿಗೆ ಕಳುಹಿಸಿದೆ:

1) ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು ರವರಿಗೆ ಮೂಲ ಕಡತ ಹಾಗೂ ಚಲನ್‌ನೊಂದಿಗೆ ಕಳುಹಿಸುತ್ತಾ ಈ ಆದೇಶದ ಪ್ರಕಾರ ಸಂಬಂಧಪಟ್ಟ ಸರ್ವೆ ನಂಬರ್ ಭೂ ಪರಿವರ್ತನೆಯಾಗಿದೆ ಎಂದು ಗಣಕೀಕೃತ ಆರ್.ಟಿ.ಸಿ.ಯಲ್ಲಿ ತಕ್ಷಣ ನಮೂದಿಸತಕ್ಕದ್ದು ಮತ್ತು ಈ ಜಮೀನಿಗೆ ಖಾತೇದಾರರ ಲೆಕ್ಕದಲ್ಲಿ ಸದರಿ ಜಮೀನಿನ ಭೂ ಕಂದಾಯವನ್ನು ಕಡಿಮೆಗೊಳಿಸುವುದು.
2) ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ : ಬಿ.ಎಂ.ಆರ್.ಡಿ.ಎ. : ಬಿ.ಎಂ.ಐ.ಸಿ.ಪಿ. ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ
3) ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನಂ.49, ಪರಿಸರ ಭವನ, ಚರ್ಚ್ ರಸ್ತೆ, ಬೆಂಗಳೂರು ರವರಿಗೆ.
4) ಉಪ ವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಉಪ ವಿಭಾಗ, ಬೆಂಗಳೂರು.
5) ಉಪ ನಿರ್ದೇಶಕರು, ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ, ಬೆಂಗಳೂರು ಉಪ ವಿಭಾಗ.
6) ಅರ್ಜಿದಾರರಾದ ಶ್ರೀ ರೇವಣ್ಣ ಬಿನ್ ಪುಟ್ಟಯ್ಯ, ಸುಣ್ಣದಕಲ್ಲು ಪಾಳ್ಯ, ಕೆಂಗೇರಿ, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು ರವರಿಗೆ ದೃಢೀಕೃತ ಅಂಚೆ ಮೂಲಕ.
7) ... ಹೆಚ್ಚಿನ ಪ್ರತಿ.

Applied On ...
Prepared By ...
Copy Compared by ...
Copy Ready On ...
Copy Delivered On ...

ವಿಶೇಷ ಜಿಲ್ಲಾಧಿಕಾರಿ (ಕಂ.)
ಬೆಂಗಳೂರು ಜಿಲ್ಲೆ.

2

# ಕರ್ನಾಟಕ ಸರ್ಕಾರ

ಮೂಲ ಪ್ರತಿ

ಬೆಂಗಳೂರು....ನಲ್ಲಿರುವ......ಎಸ್‌ಬಿಎಂ..............ಬ್ಯಾಂಕ್/ಖಜಾನೆಯಲ್ಲಿ ಪಾವತಿಸಿದ ನಗದುಹಣದ ಚಲನ್

| ಖಜಾನೆ ಕೋಡು | ಡ್ರಾ.ಅ.ಕೋಡು | ದಿನಾಂಕ | ಚಲನ್ ನಂ. |
|---|---|---|---|
| 0 8 0 0 | 0 00 1 7 | | 72 |

| | |
|---|---|
| ಪಾವತಿದಾರನ ಹೆಸರು | ಶ್ರೀ ಪ್ರಶಾಂತ ಪಟ್ಟಣಶೆಟ್ಟಿ |
| ವಿಳಾಸ | ಸುಣ್ಣಕಲ್ಲುಪಾಳ್ಯ, ಕೆಂಗೇರಿ<br>ಕೆಂಗೇರಿ ಹೋಬಳಿ, ಬೆಂ.ದ.ತಾ<br>ಬೆಂಗಳೂರು |

| | |
|---|---|
| ಪಾವತಿಯ ಉದ್ದೇಶ:<br>ಭೂ ಪರಿವರ್ತನೆಗಾಗಿ<br>ಲೆಕ್ಕದ ಬಾಬಿನ ವಿವರ: ಎಸ್.ಬಿ.<br>30029001060003 | ಸರಿಯಾಗಿದೆ ಹಣ ಸ್ವೀಕರಿಸಿ<br>7 ಶಿರಸ್ತೇದಾರ 7/10/05<br>ಮೇಲೆ ರುಜು ಮಾಡುವ ಅಧಿಕಾರಿಯ ಸಹಿ ಮತ್ತು ಪದನಾಮ<br>ಬೆಂಗಳೂರು ದಕ್ಷಿಣ ತಾಲ್ಲೂಕು |

| ಪಾವತಿಯ ವಿವರ | ಲೆಕ್ಕ ಶೀರ್ಷಿಕೆ ಕೋಡ್ | ಮೊಬಲಗು ರೂ |
|---|---|---|
| ೧) | ಬೆಂಗಳೂರು ಜಿಲ್ಲಾಧಿಕಾರಿಗಳ ಭೂ ಪರಿವರ್ತನ | 1,07,539—00 |
| ೨) | ತಿಳುವಳಿಕೆ ಪತ್ರದ ಸಂಖ್ಯೆ ಎಎಲ್‌ಎನ್(ಎಸ್‌ಆರ್)(ಎಸ್)(ಕೆಟಿ)60:05—06 ದಿನಾಂಕ:5—10—2005 ರಂ | - |
| ೩) | ತೆ ಬೆಂಗಳೂರು ದಕ್ಷಿಣ ತಾಲ್ಲೂಕು ಕೆಂಗೇರಿ ಹೋಬಳಿ, ಕೆಂಗೇರಿ ಗ್ರಾಮದ ಸರ್ವೆ ನಂ.61:1ಎ | |
| ೪) | 7 ರಲ್ಲಿ 1—39 ಗುಂಟೆ ಜಮೀನಿನ ಮೋಡಿಕುಳು ಭೂಪರಿವರ್ತನಶುಲ್ಕ | 55—00 |
| ೫) | | |
| | ಒಟ್ಟು ಮೊತ್ತ | 1,07,594—00 |

ಪದಗಳಲ್ಲಿ ಒಂದು ಲಕ್ಷದ ಏಳು ಸಾವಿರದ ಐದುನೂರ ತೊಂಬತ್ತಾಲ್ಕು ರ ಬಾರಿ ರೂಪಾಯಿಗಳು ಮಾತ್ರ

ತಾರೀಖು: 8—10—2005

ಸ್ಥಳ: ಬೆಂಗಳೂರು

ಪಾವತಿದಾರನ ಸಹಿ

ರೂ. 107594/- (ಪದಗಳಲ್ಲಿ) One lakh eleven ... ರೂಪಾಯಿಗಳು ಮಾತ್ರ ಸ್ವೀಕರಿಸಿದೆ.

8 OCT 2005 CASH RECEIVED

ಖಜಾಂಚಿ ಲೇಖಾಪಾಲ ಖಜಾನೆ/ಬ್ಯಾಂಕ್ ಅಧಿಕಾರಿ

By ...
Applied On 270368
Copy Prepared By ...
Copy Compared by ...
Copy Ready On 020468
Copy Delivered On 11/01/06
I.A.R. No. 61 1168

"ಛಾಯಪ್ರತಿ"

ಜಿಲ್ಲಾಧಿಕಾರಿಗಳ ಪರವಾಗಿ
ಬೆಂಗಳೂರು ಜಿಲ್ಲೆ